# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 893 |
| ಮಾನ್ಯ ಸದಸ್ಯರ ಹೆಸರು | : | ಡಾ: ತಳವಾರ ಸಾಬಣ್ಣಾ |
| ಉತ್ತರಿಸುವ ದಿನಾಂಕ | : | 23-02-2024 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಯಲು ಪ್ರದೇಶಗಳಲ್ಲಿ, ಸ್ಲಂಗಳಲ್ಲಿ ವಾಸಿಸುತ್ತಿರುವ ಅಲೆಮಾರಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ವಾಸ ಮಾಡಲು ಮನೆಗಳನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು; | ಸಮಾಜ ಕಲ್ಯಾಣ ಇಲಾಖೆಯಿಂದ 2022-23 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಅಲೆಮಾರಿ ಸಮುದಾಯದವರಿಗೆ 10,000 ಮನೆಗಳ ಗುರಿ ಹಾಗೂ ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರಿಗೆ 5,000 ಮನೆಗಳ ಗುರಿ ಒಟ್ಟಾರೆಯಾಗಿ 15,000 ಮನೆಗಳ ಗುರಿಗಳನ್ನು ನಿಗಧಿಪಡಿಸಿ, ರೂ.300.00 ಕೋಟಿಗಳ ಅನುದಾನವನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.<br><br>15,000 ಮನೆಗಳ ಗುರಿಗಳ ಪೈಕಿ ಮೊದಲನೇ ಹಂತದಲ್ಲಿ ಪರಿಶಿಷ್ಟ ಜಾತಿಯವರಿಗೆ 3008 ಮನೆ ಹಾಗೂ ಪರಿಶಿಷ್ಟ ಪಂಗಡದವರಿಗೆ 2305 ಮನೆಗಳು ಒಟ್ಟರೆಯಾಗಿ 5313 ಮನೆಗಳ ಗುರಿಗಳನ್ನು ನಿಗಧಿಪಡಿಸಿದೆ. ಎರಡನೇ ಹಂತದಲ್ಲಿ ಪರಿಶಿಷ್ಟ ಜಾತಿ ಅಲೆಮಾರಿ ಸಮುದಾಯದವರಿಗೆ 3000 ಮನೆ ಹಾಗೂ ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರಿಗೆ 2000 ಮನೆಗಳ ಗುರಿಗಳನ್ನು ನಿಗಧಿಪಡಿಸಿ, ವಸತಿ ಇಲಾಖೆಯಿಂದ ಆದೇಶ ಹೊರಡಿಸಲಾಗಿರುತ್ತದೆ.<br><br>ಪ್ರತಿ ಮನೆಗೆ ರೂ.2.00 ಲಕ್ಷಗಳಂತೆ ಅನುದಾನವನ್ನು ಡಿ.ಬಿ.ಟಿ ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ 04 ಹಂತಗಳಲ್ಲಿ ರಾಜೀವ್ ಗಾಂಧಿ ವಸತಿ ನಿಗಮದಿಂದ ಬಿಡುಗಡೆ ಮಾಡಲಾಗುತ್ತಿದೆ |

<table>
<tr><td>ಆ)</td><td>ಬಡ ಮತ್ತು ಹಿಂದುಳಿದ ಜನರಿಗೆ ನೀಡುವ ಅಥವಾ ಮನೆಗಳನ್ನು ಕಟ್ಟಿಕೊಳ್ಳಲು ಸರ್ಕಾರ ನಿಗಧಿಪಡಿಸಿದ ಒಟ್ಟು ವೆಚ್ಚ ಎಷ್ಟು;</td><td rowspan="3">ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರಿಗೆ ಗ್ರಾಮೀಣ ಪ್ರದೇಶದಲ್ಲಿ ಮನೆಯನ್ನು ನಿರ್ಮಿಸಿಕೊಳ್ಳಲು ಸರ್ಕಾರದಿಂದ ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿಯಲ್ಲಿ ನೀಡಿರುವ ಅನುದಾನದಿಂದ ಪ್ರತಿ ಮನೆಗೆ ರೂ.2.00 ಲಕ್ಷಗಳ ಸಹಾಯಧನವನ್ನು ನೀಡಲಾಗುತ್ತಿದೆ. ಫಲಾನುಭವಿಗಳ ವಂತಿಗೆ ಬಗ್ಗೆ ನಿಗಧಿಪಡಿಸಿರುವುದಿಲ್ಲ.</td></tr>
<tr><td>ಇ)</td><td>ಒಟ್ಟು ವೆಚ್ಚದಲ್ಲಿ ಸರ್ಕಾರ ಪಾಲು ಎಷ್ಟು; ಮತ್ತು ಅಲೆಮಾರಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರಿಗೆ ನೀಡಬೇಕಾದ ಪಾಲೆಷ್ಟು;</td></tr>
<tr><td>ಈ)</td><td>ತೀರ ಹಿಂದುಳಿದ ಈ ಕುಟುಂಬಗಳು ಅವರ ಪಾಲಿನ ವೆಚ್ಚವನ್ನು ಭರಿಸಲು ಸಾಧ್ಯವಾಗದೆ ಬಯಲು ಪ್ರದೇಶದಲ್ಲಿ/ ಸ್ಲಂಗಳಲ್ಲಿ ವಾಸ ಮಾಡುತ್ತಿರುವುದರಿಂದ ಸರ್ಕಾರ ನೀಡುವ ಪರಿಹಾರವೇನು?</td></tr>
</table>

**ಸಕಇ 93 ಎಸ್‌ಎಲ್‌ಪಿ 2024**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**